

ಎಡದಿಂದ ಬಲಕ್ಕೆ:

1. ವನಜ ತುಂಬಿರುವ ಕಾಡಿನ ಅರಸ ಆತ (4)
3. ಸ್ವರ್ಗದಂತೆ ತೋರುತ್ತಿದೆ ಈ ಕಡಲು (3)
4. ಆ ಜಾನುವಾರಗಳದು ಎಂಥ ಭಾರ ಗೊತ್ತೇ? (3)
6. ಕದಿವವರ ಶತ್ರು–ಸೂರ್ಯ (4)
7. ಮಕ್ಕರಿಯಲ್ಲೇ ಹೇಗೆ ಬಂತು ಮೊಸಳೆ? (3)
9. ಒಪ್ಪಿಲ್ಲದ ವಸ್ತುಗಳೇ ಅಲ್ಲಿ ಬಹಳ, ಧಾರಾಳ (3)
11. ತವರ ತರುವ ಕೆಲಸ ಬೇಗ ಬೇಗ (3)
13. ನಕ್ಕರೇ ಎಂದು ಕೇಳಿದರೆ ಇಲ್ಲವೆಂದ (3)
15. ಹೊಸ ಹಕ್ಕಿ ಏನಲ್ಲ, ಬೆಳ್ಳನ್ನ ನೀರಹಕ್ಕಿ (4)
17. ತಪ್ಪನ್ನು ತಿದ್ದಿಯೇ ಪವಿತ್ರನಾದ (3)
18. ಗಾಂಪನನ್ನೇ ಕಚ್ಚಿಹಾಕಿತು ನೋಡಿ ಸರ್ಪ (3)
19. ಸರದಲ್ಲಿ ಪೋಣಿಸಿದ್ದು, ಬೆಳ್ಳಗಿಲ್ಲದ್ದು (4)

ಮೇಲಿಂದ ಕೆಳಕ್ಕೆ:

1. ವಾರಿಧಿಯ ಪರಿಸ್ಥಿತಿ ಕುರಿತು ಸಂಪೂರ್ಣ ವಿವರ (3)
2. ವಜ್ರದ ಹಾರ ಧರಿಸಿ ನಿಂತ ಯಮ (3)
3. ಪೊಲೀಸರ ಪ್ರಯತ್ನ ಫಲಕಾರಿಯಾಯಿತು (3)
5. ಅಪ್ಪಣ್ಣನ ಮನೆ ನೆಲ ಕಿಂಚಿತ್ತೂ ಒರಟಿಲ್ಲ (3)
7. ಸಮೂಹ ತತ್ವಗಳಿಗೇ ಅಲ್ಲಿ ಭಾರೀ ಪ್ರಾಮುಖ್ಯ (3)
8. ಚಿತ್ತಾರಮಯವಾಗಿರುವಂತೆ ನಿರ್ಮಾಣವಾದದ್ದು (3)
9. ದೇವನನ್ನೊಲಿಸಲು ಇದೂ ಒಂದು ಕ್ರಮ (3)
10. ಕುಶಾಲ ನಗರದಲ್ಲಿ ಕಂಡ ಸೇನೆ ಗೊತ್ತೇ? (3)
12. ಪರಕೆ ಕೊಂಡು ತರಲು ಕುದುರೆ ಏರುವ ಮೆಟ್ಟಿಲು (3)
14. ಕೂಳಿಗಾಗಿ ಭಾರೀ ಹೋರಾಟ (3)
15. ಅಂತಕನೇ ಅಲ್ಲಿ ಕೊಲೆಗಾರ (3)
16. ಪಕ್ಷಿಯನ್ನೇ ತಿರುಗಿಸಿ ಅಣಿಗೊಳಿಸಿದ 'ಹಾರುವ ಅಸ್ತ್ರ' (3)

## ಪದಬಂಧ: 23-9-2010ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಪಸ್ವರ; 3. ಪ್ರಬಂಧ; 4. ಸಹನೆ; 6. ಮತಿಹೀನ; 7. ಅವಸರ; 8. ಸಾಹುಕಾರ; 10. ತಕರಾರು; 12. ಗಜಕರ್ಣ; 14. ಅಂಬಾಪತಿ; 16. ವರ್ಜಿತ; 17. ವಾರಿಜ; 18. ಕಸಿವಿಸಿ.

ಮೇಲಿಂದ ಕೆಳಕ್ಕೆ:

1. ಅಧಮ; 2. ರಸನೆ; 3. ಪ್ರಹಸನ; 5. ನೆರವು; 7. ಅಸ್ವಮಾನ; 9. ರಕ್ತವರ್ಣ; 11. ರಾಜೀವ; 13. ಅಜಗಜ; 14. ಅಂತಕ; 15. ಶಿವಾಸಿ.

# ಪ್ರಶ್ನಾಂಕಣ

## 'ಹಾರದ ಹಕ್ಕಿ'–ಏಕೆ?



ಹಕ್ಕಿ ಎಂದೊಡನೆ ಮೂಡುವ ಚಿತ್ರ ಒಂದೇ: 'ರೆಕ್ಕೆಗಳನ್ನು ತೆರೆದು ಮುಗಿಲಲ್ಲಿ ತೇಲುತ್ತಿರುವ ಜೀವಿ' ಆದ್ದರಿಂದಲೇ ಹಕ್ಕಿ ಎಂದರೆ ಹಾರುವ ಜೀವಿ ಎಂದೇ ಪ್ರಸಿದ್ಧ. ಹಾರಾಟ ಸಾಮರ್ಥ್ಯದಿಂದಾಗಿಯೇ ಹಕ್ಕಿಗಳಿಗೆ ಆಕಾಶಯಾನದ ಶಕ್ತಿ; ಶತ್ರುಗಳಿಂದ ರಕ್ಷೆ; ವಲಸೆ ಹೋಗಬಲ್ಲ ಬಲ. ತನ್ಮೂಲಕ ಕೆಟ್ಟ ಹವೆಯಿಂದ, ಆಹಾರದ ಅಭಾವದಿಂದ ಮುಕ್ತಿ.

ಹಾಗೆಲ್ಲ ಇದ್ದರೂ ಪಕ್ಷಿ ಪ್ರಪಂಚದಲ್ಲಿ ಹಾರಬಲ್ಲ ಶಕ್ತಿಯೇ ಇಲ್ಲದ ಪ್ರಭೇದಗಳು ಹಲವಾರಿವೆ: 'ಆಸ್ಟ್ರಿಚ್, ಎಮು, ರ್‍ಹಿಯಾ, ಕ್ಯಾಸೋವರಿ, ಕಿವಿ, ಕಕಾಪೋ, ಕಾಗು, ಟಕಾಹೇ... ಇತ್ಯಾದಿ.' ವಾಸ್ತವ ಏನೆಂದರೆ ಹಾರಾಟ ಸಾಮರ್ಥ್ಯ ಯಾವ ಹಕ್ಕಿಗೂ ಪ್ರಿಯವಾದದ್ದಲ್ಲ. ಸೂಕ್ತ ಅವಕಾಶ ಒದಗಿದರೆ ಎಲ್ಲ ಹಕ್ಕಿಗಳೂ ಹಾರಾಟ ಕೈಬಿಟ್ಟು ನೆಲವಾಸಿಗಳಾಗಿರಲೇ ಬಯಸುತ್ತವೆ. ಅಂತಹ ಹೇರಳ ನಿದರ್ಶನಗಳು ಜಗದಾದ್ಯಂತ ಪಕ್ಷಿ ಪ್ರಪಂಚದಲ್ಲಿ ಕಾಣಸಿಗುತ್ತವೆ.

ಹಾಗಾದರೆ ಹಾರಾಟ ಹಕ್ಕಿಗಳಿಗೆ ಬೇಡ ಏಕೆ?

ಅದಕ್ಕೆ ಕಾರಣ ತುಂಬ ಸ್ಪಷ್ಟ: ಹಾರಾಟ ತುಂಬ ತ್ರಾಸದಾಯಕ ಕೆಲಸ; ವಿಪರೀತ ಶಕ್ತಿ ವ್ಯಯವಾಗುವ ಕೆಲಸ. ಹಾಗಾಗಿ ಹಕ್ಕಿಗಳಿಗೆ 'ರಾಕ್ಷಸ ಹಸಿವು.' ಆದ್ದರಿಂದಲೇ ಪ್ರತಿಯೊಂದು ಹಕ್ಕಿಯೂ ಪ್ರತಿದಿನವೂ ಅದರ ಶರೀರ ತೂಕದ ಶೇಕಡ ಮುವ್ವತ್ತರಷ್ಟು ಪ್ರಮಾಣದ ಆಹಾರವನ್ನು ಸೇವಿಸಲೇಬೇಕು. ವರ್ಷಪೂರ್ತಿ ಪ್ರತಿದಿನ– ಬಿಸಿಲಿರಲಿ, ಚಳಿಯಿರಲಿ, ಮಳೆ ಸುರಿಯುತ್ತಿರಲಿ– ಇಷ್ಟು ಭಾರೀ ಪ್ರಮಾಣದ ಆಹಾರದ ಅನ್ವೇಷಣೆ–ಗಳಿಕೆ ತುಂಬ ಕಷ್ಟದಾಯಕ. ಅದಕ್ಕೇ ಹಾರುವ ಹಕ್ಕಿಗಳು ಮುಂಜಾನೆಯಿಂದ ಮುಸ್ಸಂಜೆಯವರೆಗೂ ಎಡೆಬಿಡದೆ ಕ್ರಿಯಾಶೀಲವಾಗಿರುತ್ತವೆ. ಚಳಿಗಾಲದಲ್ಲಿ ಸಾವಿರಾರು ಕಿಲೋಮೀಟರ್ ದೂರದ ಬೆಚ್ಚನೆಯ ಪ್ರದೇಶಗಳಿಗೆ, ಸಮೃದ್ಧ ಆಹಾರದ ನೆಲೆಗಳಿಗೆ ವಲಸೆಯಾನ ಕೈಗೊಳ್ಳುತ್ತವೆ. ದಾರಿಯಲ್ಲಿ ನಾನಾ ಅಪಾಯಗಳಿಗೆ ಸಿಲುಕಿ ಹೇರಳ ಸಂಖ್ಯೆಯಲ್ಲಿ ಪ್ರಾಣಬಿಡುತ್ತವೆ. ಹಾರುವ ಹಕ್ಕಿಗಳಿಗೆ ವಿಶ್ರಾಂತಿ– ನೆಮ್ಮದಿ ಎರಡೂ ದುಸ್ತರ. ಆದ್ದರಿಂದಲೇ ಹಾರಬಲ್ಲ ಹಕ್ಕಿಗಳಲ್ಲಿ ಅಲ್ಪಾಯುಷಿ ಪ್ರಭೇದಗಳೇ ಅತ್ಯಧಿಕ.

ಅದೇ ಹಾರದ ಹಕ್ಕಿಗಳ ಬದುಕು ಇಷ್ಟೆಲ್ಲ ಜಟಿಲವಲ್ಲ. ಇಂಥ ಹಕ್ಕಿಗಳಿಗೆ ಅವುಗಳ ಶರೀರದ ತೂಕದ ಶೇಕಡ ನಾಲ್ಕರಷ್ಟೇ ಪ್ರಮಾಣದ ಆಹಾರ ಸಾಕು. ಆದ್ದರಿಂದಲೇ ಅವುಗಳದು ಗಡಿಬಿಡಿ ಇಲ್ಲದ, ಒತ್ತಡ ಇಲ್ಲದ, ವಲಸೆ ಅಗತ್ಯ ಇಲ್ಲದ ಜೀವನ. ಈ ಕಾರಣದಿಂದಲೇ ಶತ್ರುಮುಕ್ತವಾದ, ಆಹಾರಸಮೃದ್ಧಿ ಇರುವ ಎಲ್ಲೆಡೆ ಹಾರಾಟ ಕೈಬಿಡಲೇ ಎಲ್ಲ ಹಕ್ಕಿಗಳೂ ಸಿದ್ಧ.

■ ಎನ್. ವಾಸುದೇವ್